**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಯು. ಅರವಿಂದ ಕುಮಾರ್
ಎಚ್.ಎನ್. ಶ್ಯಾನುಭಾಗ್
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್
ರೂಪಾ ವಸಂತ ರಾವ್
ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ ರಾವ್
ಯು. ಪ್ರಫುಲ್ಲಚಂದ್ರ ರಾವ್

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಲೇಖನಗಳು ಅಥವಾ ಪತ್ರಿಕೆಯ ಇತರ ಯಾವುದೇ ವಿಷಯಗಳ ಬಗ್ಗೆ ಯಾವುದೇ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.

## ಚಿಂತನ

ಭ್ರಷ್ಟಾಚಾರ, ಕೊಲೆ, ಸುಲಿಗೆ, ದರೋಡೆ, ಬಲತ್ಕಾರ ಮೊದಲಾದವುಗಳು ಇಂದು ನಮ್ಮ ದೇಶದಲ್ಲಿ - ನಮ್ಮ ಆಸುಪಾಸಿನಲ್ಲಿ ನಡೆಯುತ್ತಿರುವ ಕಣ್ಣಿಗೆ ಕಾಣುತ್ತಿರುವ ಸಂಗತಿಗಳಾಗಿವೆ. ಶೇಕಡಾ 99ರಷ್ಟು ಜನರು ಇವುಗಳ ವಿರುದವಾಗಿರುತ್ತಾರೆ. ಬಹುಮಂದಿ ಪ್ರಾಮಾಣಿಕತೆಯ ಪರ ಇದ್ದರೂ ಅದನ್ನು ಇನ್ನೊಬ್ಬರಿಗೆ ತೋರ್ಪಡಿಸಲು, ವ್ಯಕ್ತಪಡಿಸಲು ವಿಫಲರಾಗುತ್ತಾರೆ.

ಉದಾ: ಮಹಾಭಾರತದ ಸಭಾಪರ್ವದಲ್ಲಿ ಬರುವ ದ್ರೌಪದೀ ವಸ್ತ್ರಾಪಹರಣ ಸಂದರ್ಭದಲ್ಲಿ ಭೀಷ್ಮಾದಿಗಳು ಚಕಾರವೆತ್ತದೆ ಕೈ ಕೈ ಹಿಸುಕಿಕೊಂಡದ್ದು; ನಮ್ಮ ಕಣ್ಣ ಎದುರಿನಲ್ಲಿಯೇ ರೌಡಿಗಳಿಂದ ತೊಂದರೆ ಗಳಾದರೂ ಸಾಕ್ಷಿಗಳಾಗಿರಲು ಯಾರೂ ಮುಂದೆ ಬಾರದೆ ಇರುವುದು-ಮೊದಲಾದವು ಗಳು ನಮಗೆ ತಿಳಿದ ವಿಚಾರ.

ಹಾಗಿದ್ದಲ್ಲಿ ನಾವು ಅಧರ್ಮದೊಡನೆ ರಾಜಿಮಾಡಿಕೊಳ್ಳುತ್ತಿದ್ದೇವೆಯೇ? ಒಂದು ದೃಷ್ಟಿಯಿಂದ ಹೌದೆನ್ನಬೇಕು. ನಮಗೆ ಯಾಕೆ ಇನ್ನೊಬ್ಬರ ತಂಟೆ? ನಮ್ಮಷ್ಟಕ್ಕೆ ನಾವಿರೋಣ ಎಂದು ತಿಳಿದುಕೊಳ್ಳುವವರೇ ಹೆಚ್ಚು.

ನಾವು ನ್ಯಾಯದ ಪರವಾಗಿದ್ದೇವೆ ಎಂದು ಬಾಯಿ ಮಾತಿನಲ್ಲಿ ಬಹಳಷ್ಟು ಮಂದಿ ಹೇಳುತ್ತಾರೆ. ನ್ಯಾಯವೇ ಗೆಲ್ಲಬೇಕೆಂದು ಹಂಬಲಿಸುತ್ತಾರೆ. ಈ ಬಗ್ಗೆ ಸ್ವಲ್ಪತ್ಯಾಗ, ಧೈರ್ಯ ಕೂಡಾ ಅಗತ್ಯ. ಕೆಲವೊಮ್ಮೆ ಸಣ್ಣ ಪ್ರಮಾಣದ 'ಬೆಲೆ'ಯೂ ತೆರಬೇಕಾಗಬಹುದು ಎಂದರೆ ಯಾವುದೇ ಅಗತ್ಯ ವಸ್ತುವಿಗೆ ಬೆಲೆಕೊಟ್ಟು ಪಡೆಯುವುದಿಲ್ಲವೇ? ಅದೇ ರೀತಿ ಈ 'ಧರ್ಮ'ದ ವ್ಯಾಪ್ತಿಗೆ 'ಬೆಲೆ' ತೆರಲು ಸಿದರಾಗಬೇಕು.

ಹೆಚ್ಚಾಗಿ ಯುವಜನತೆ ಈ ವಿಚಾರವನ್ನು ತಿಳಿದುಕೊಂಡಲ್ಲಿ ಮುಂದಿನ ದಿನಗಳಲ್ಲಿ ದುಷ್ಟ ಕಾರ್ಯಗಳು ಮರೆಯಾಗಿ ಹೆಚ್ಚು ಹೆಚ್ಚು ಸತ್ಕಾರ್ಯಗಳು ನಡೆಯುವುದರಲ್ಲಿ ಸಂಶಯವಿಲ್ಲ. ದೇವರು ಎಲ್ಲರಲ್ಲಿಯೂ ಇಂತಹ ಮನೋಭಾವನೆ ಬೆಳೆದುಬರುವಂತೆ ಅನುಗ್ರಹಿಸಲಿ ಎಂದು ಹಾರೈಕೆ.

# ತಂತ್ರ ಪ್ರಪಂಚ

**-ಆತ್ಮಾರಾಮ ಶಾಸ್ತ್ರೀ, ಬೆಂಗಳೂರು.**

ಶಾಸ್ತ್ರ ಸಾಹಿತ್ಯದಲ್ಲಿ ತಂತ್ರಪ್ರಪಂಚ ಬಹಳ ವಿಶಾಲವಾದುದು, ತಂತ್ರಶಾಸ್ತ್ರಗಳು ಔಪಾಸನಿಕ ವಿಧಿಗಳ ಮೇರುಕೂಟಗಳು. ಯಜ್ಞ-ಯಾಗಾದಿಗಳಿಗಾಗಿ ವೈದಿಕ ಸಾಹಿತ್ಯ ವಿಪುಲವಾಗಿ ಬೆಳೆದಂತೆ ಉಪಾಸನಾ ಸಾಧನಗಳಲ್ಲಿ ತಂತ್ರಸಾಹಿತ್ಯವೂ ವಿಸ್ತರವಾಗಿ ಬೆಳೆದಿದೆ. ಹೇಗೆ ಯಜ್ಞ-ಯಾಗಗಳು ಅತಿರೇಕತೆಯಿಂದ ನಷ್ಟಪ್ರಾಯಗಳಾದವೋ ಹಾಗೇ ದುರುಪಯೋಗದಿಂದ ತಂತ್ರಶಾಸ್ತ್ರಗಳೂ ಶಿಷ್ಟ ನಿಂದ್ಯಗಳಾದವು. ಆದರೂ ವೈದಿಕ ಯಜ್ಞಗಳಂತೆ ತಂತ್ರೋಪಾಸನೆಗಳೂ ಅಲ್ಪ-ಸ್ವಲ್ಪ ಲೋಕಮಾನ್ಯತೆಯನ್ನು ಉಳಿಸಿಕೊಂಡಿವೆ.

ತಂತ್ರಗಳ ಬಗೆಗೆ ಜನರಲ್ಲಿ ಸ್ಪಷ್ಟಜ್ಞಾನಕ್ಕಿಂತ ಭ್ರಮೆಗಳೇ ಹೆಚ್ಚು. ಇದಕ್ಕೆ ಅವೈಜ್ಞಾನಿಕ ಕಲ್ಪನೆಗಳೇ ಕಾರಣ. ಆಧುನಿಕ ವಿದ್ಯಾಭ್ಯಾಸವೂ ನಮ್ಮ ಪರಂಪರೆಯ ಜ್ಞಾನದ ಮೇಲೆ ಕೀಳರಿಮೆಯನ್ನುಂಟುಮಾಡಿದೆ. ಭಾರತೀಯ ಶಾಸ್ತ್ರಗಳೆಲ್ಲ ಮೂಢ ವಿಶ್ವಾಸವನ್ನು ಪೋಷಿಸುವ ಗೊಡ್ಡು ಪುರಾಣಗಳೆಂಬ ಭಾವನೆ ಜನರಲ್ಲಿ ಬಲವಾಗಿ ಬೇರೂರಿದೆ. ಏಕೆಂದರೆ ಭಾರತೀಯರಿಗೆ ಪಾಶ್ಚಾತ್ಯ ಸಂಸ್ಕೃತಿಯೇ ಪ್ರಿಯವಾಗಿದೆ. ಭಾರತೀಯ ಶರೀರದಲ್ಲಿ ಪಾಶ್ಚಾತ್ಯ ಆತ್ಮವನ್ನು ಆವಾಹಿಸಿಕೊಂಡು ಭಾರೋಪೀಯರೆನಿಸಿದ್ದಾರೆ ಭಾರತೀಯರು.

ಜಾನ್ ವುಡ್ರೋಫ್ ಎಂಬ ಪಾಶ್ಚಾತ್ಯ ವಿದ್ವಾಂಸರೊಬ್ಬರು ನಮ್ಮ ತಂತ್ರಶಾಸ್ತ್ರಗಳನ್ನು ಗಹನವಾಗಿ ಅಧ್ಯಯನ ಮಾಡಿ ಪಾಶ್ಚಾತ್ಯರ ಮಾನಸ ಪುತ್ರರಾದ ಭಾರತೀಯರನ್ನು ಹೀಗೆ ಗೇಲಿ ಮಾಡಿದ್ದಾರೆ - They (ಎಂದರೆ ಇಂಗ್ಲಿಷ್ ಕಲಿತವರು) were, and some of them still are, the "Manasaputhras' of the English. For them what was the English and western was the mode.

ತಂತ್ರವನ್ನು ಆಗಮವೆಂದೂ ಕರೆಯುತ್ತಾರೆ. ಇದು ವೇದದಷ್ಟೇ ಪ್ರಾಚೀನವೆಂದು ಕೆಲವರು ಹೇಳಿದರೆ, ವೇದಕ್ಕಿಂತಲೂ ಪ್ರಾಚೀನವೆಂದು ಇನ್ನು ಕೆಲವರು ಹೇಳುತ್ತಾರೆ. ಇದಕ್ಕೆ ಆಧಾರಕ್ಕಿಂತ ಅಭಿಮಾನವೇ ಕಾರಣವೆನ್ನಿ! ಅದೇನೇ ಇರಲಿ, ನಮ್ಮಲ್ಲಿ ನಿಗಮ (ವೇದ)ಗಳೂ ಆಗಮಗಳೂ ಬಹಳ ಪುರಾತನ ಸಾಹಿತ್ಯಗಳೆನ್ನುವುದರಲ್ಲಿ ಎರಡು ಮಾತಿಲ್ಲ.

ಆಗಮ ಮತ್ತು ತಂತ್ರ ಎಂಬ ಶಬ್ದಗಳ ವ್ಯುತ್ಪತ್ತಿಯನ್ನು ಹೀಗೆ ಹೇಳುತ್ತಾರೆ.

ಆಗತಂ ಶಿವವಕ್ತ್ರೇಭ್ಯೋ ಗತಂ ಚ ಗಿರಿಜಾ ಮುಖೇ ।

ಮತಂಚ ವಾಸುದೇವಸ್ಯ ತಸ್ಮಾದಾಗಮ ಉಚ್ಯತೇ ॥

(ಯಾವ ಶಾಸ್ತ್ರ ವಾಕ್ಯಗಳು ಶಿವನ ಮುಖಗಳಿಂದ ಬಂದು, ಪಾರ್ವತಿಯ ಮುಖವನ್ನು ಸೇರಿದವೋ ಮತ್ತು ವಿಷ್ಣುವಿಗೆ ಸಮ್ಮತವಾದವೋ ಅವೇ ಆಗಮಗಳು) ಮುಖ್ಯವಾಗಿ ಶೈವಾಗಮಗಳು ಶಿವ-ಪಾರ್ವತಿಯರ ಸಂವಾದ ರೂಪದಲ್ಲೇ ಇರುವುದರಿಂದ ಈ ರೀತಿಯ ವ್ಯುತ್ಪತ್ತಿಯನ್ನು ಹೇಳಿರಬಹುದು.

'ತಂತ್ರ'ವು ತನು ಎಂಬ ಧಾತುವಿನಿಂದ ಬಂದದ್ದು. 'ತನೋತಿ ತ್ರಾಯತೇ ಚೇತಿ ತಂತ್ರಮ್' ಎಂದರೆ ಮಂತ್ರ ರೂಪದ ಅರ್ಥಗಳನ್ನು ವಿಸ್ತರಿಸುತ್ತಾ, ದುರಿತಗಳಿಂದ ನಮ್ಮನ್ನು ರಕ್ಷಿಸುವ ಕಾರಣ ಇದು ತಂತ್ರ.

ತಂತ್ರ ಶಾಸ್ತ್ರಗಳು ಮುಖ್ಯವಾಗಿ ದೇವತೋಪಾಸನೆಯ ವಿಧಿಗಳನ್ನೂ, ಅಲ್ಲಿ ವಿನಿಯೋಗಿಸುವ ಮಂತ್ರಗಳನ್ನೂ ವಿಶದಪಡಿಸುತ್ತವೆ. ವೈದಿಕ ಸಾಹಿತ್ಯದಲ್ಲಿ ಬ್ರಾಹ್ಮಣ, ಸಂಹಿತೆಗಳಿದ್ದಂತೆ ಇದು. ಪ್ರಧಾನವಾಗಿ ದೇವತಾ ವಿಗ್ರಹಗಳ, ದೇವಾಲಯಗಳ ರಚನಾಕ್ರಮಗಳ, ದೇವತೆಗಳ ಪ್ರತಿಷ್ಠೆಯಿಂದ ಹಿಡಿದು ನಿತ್ಯಾರಾಧಾನೆ, ಉತ್ಸವಾದಿಗಳ ಆಚರಣೆಯ ವಿಧಿಗಳವರೆಗೆ ಇವುಗಳು ವಿವರಣೆಗಳನ್ನು ಕೊಡುತ್ತವೆ. ದೇವತಾಭೇದಗಳಿಂದ ಉಪಾಸನಾ ಭೇದಗಳು ಉಂಟಾಗುವುದು ಸಹಜ. ಇದಕ್ಕೂ ತಂತ್ರಗಳೇ ಮಾರ್ಗದರ್ಶನವೀಯುತ್ತವೆ.

ದೇವತೋಪಾಸನೆಯ ಐದು ಅಂಗಗಳಾಗಿ ತಂತ್ರಗಳನ್ನು ಪಟಲ, ಪದ್ಧತಿ, ಕವಚ, ಸಹಸ್ರನಾಮ, ಸ್ತೋತ್ರಗಳೆಂದು ವಿಭಜಿಸಲಾಗಿದೆ.

ತಂತ್ರಗಳಲ್ಲಿ ಪ್ರಮುಖವಾಗಿ ನಾಲ್ಕು ವಿಷಯಗಳಿಗೆ ಪ್ರಾಧಾನ್ಯವಿದೆ. ಅವುಗಳೆಂದರೆ - ಜ್ಞಾನ, ಯೋಗ, ಕ್ರಿಯೆ ಮತ್ತು ಚರ್ಯೆ. ಜ್ಞಾನಭಾಗದಲ್ಲಿ ತಂತ್ರಗಳ ಮತ್ತು ಮಂತ್ರಗಳ ರಹಸ್ಯ, ಪ್ರಭಾವಗಳು ವರ್ಣಿತವಾಗಿವೆ. ಯೋಗದಲ್ಲಿ ಧ್ಯಾನಮಂತ್ರಗಳ ಸಿದ್ಧಿಯ ಪ್ರಕಾರ ನಿರೂಪಿತವಾಗಿದೆ. ಕ್ರಿಯಾ ಭಾಗದಲ್ಲಿ ಮೂರ್ತಿಪೂಜೆಗೆ ಸಂಬಂಧಪಟ್ಟ ಪೂರ್ವಪರಗಳ ವರ್ಣನೆಯಿದೆ. ಚರ್ಯಾ ಭಾಗದಲ್ಲಿ ಉತ್ಸವಾದಿಗಳು ವಿವೃತವಾಗಿವೆ.

ದೇವತಾ ಭೇದದಿಂದ ತಂತ್ರಗಳು ಅನೇಕ ಪ್ರಕಾರಗಳಾಗಿವೆ. ವಿಷ್ಣುವಿಗೆ ಸಂಬಂಧಿಸಿದ ವೈಷ್ಣವ ತಂತ್ರಗಳು, ಶಿವನ ಶೈವತಂತ್ರಗಳು, ಶಕ್ತಿಯ ಶಾಕ್ತ ತಂತ್ರಗಳು, ಗಣಪತಿಯ ಗಾಣಪತ್ಯ ತಂತ್ರಗಳು ಇವೆ. ಹಾಗೇ ಬೌದ್ಧ ತಂತ್ರಗಳು, ಜೈನತಂತ್ರಗಳೂ ಪ್ರಚಲಿತ ಇವೆ. ವೈಷ್ಣವ ತಂತ್ರಗಳಲ್ಲಿ ಪ್ರಧಾನವಾದುದು ಪಾಂಚರಾತ್ರ. ಇದನ್ನು ಪಾಂಚರಾತ್ರ ಸಂಹಿತೆ ಎನ್ನುತ್ತಾರೆ. ಇದರ ಪ್ರಕಾರ ಇನ್ನೂರಕ್ಕಿಂತಲೂ ಹೆಚ್ಚು ವೈಷ್ಣವ ತಂತ್ರಗಳಿವೆ. ಅಹಿರ್ಬುಧ್ನ್ಯ ಸಂಹಿತೆ, ಈಶ್ವರ ಸಂಹಿತೆ, ಪೌಷ್ಕರ ಸಂಹಿತೆ, ಪರಮ ಸಂಹಿತೆ, ಸಾತ್ತ್ವತ ಸಂಹಿತೆ, ಬೃಹದ್ಬ್ರಹ್ಮ ಸಂಹಿತೆ, ನಾರದ ಪಾಂಚರಾತ್ರ - ಇವುಗಳು ಪ್ರಮುಖ.

ಹೀಗೆ ಶೈವಾಗಮವೂ ವಿಸ್ತೃತ ಸಾಹಿತ್ಯವನ್ನೊಳಗೊಂಡಿದೆ. ಇದರಲ್ಲಿ ಸಿದ್ಧಾಂತ ಶೈವ, ಜಂಗಮ ಶೈವ, ವೀರ ಶೈವ, ರೌದ್ರ, ಪಾಶುಪತ, ಕಾಪಾಲಿಕಗಳೆಂಬ ಅವಾಂತರ ಭೇದಗಳಿವೆ. ಉಪಾಸನೆಯಲ್ಲಿ ವಾಮ-ದಕ್ಷಿಣಗಳೆಂಬ ಭೇದಗಳನ್ನು ಹೇಳುತ್ತಾರೆ. ರೌರವಾಗಮ, ಅಜಿತಾಗಮ, ಕಾಮಿಕಾಗಮ, ಮೂಲಾವತಾರತಂತ್ರ, ಸ್ವಚ್ಛಂದ ತಂತ್ರ ಎಂದು ಅನೇಕ ಗ್ರಂಥಗಳು ಪ್ರಸಿದ್ಧವಾಗಿದೆ.

ಶಾಕ್ತಾಗಮದಲ್ಲೂ ಅತಿ ವಿಸ್ತೃತ ಸಾಹಿತ್ಯವಿದೆ. ಗ್ರಂಥಗಳೂ ಅಸಂಖ್ಯ ಈ ಗ್ರಂಥಗಳು 'ಯಾಮಲ'ವೆಂದೂ ಪ್ರಖ್ಯಾತವಾಗಿವೆ. ಬ್ರಹ್ಮಯಾಮಲ, ವಿಷ್ಣುಯಾಮಲ, ರುದ್ರಯಾಮಲವೇ ಮೊದಲಾದ ಯಾಮಲ ಗ್ರಂಥಗಳಿವೆ.

(6ನೇ ಪುಟಕ್ಕೆ ...)

## ಹೊಸ ಬೆಳಕು

**ನಲ್ನುಡಿ :**

***ಮುಹೂರ್ತಂ ಜ್ವಲಿತಂ ಶ್ರೇಯೋ***
***ನ ತು ಧೂಮಾಯಿತಂ ಚಿತಂ ।***

ಅಂದರೆ ಯುಗಗಟ್ಟಲೆ ಹೊಗೆಯಾಡುವುದಕ್ಕಿಂತ ಒಂದು ಕ್ಷಣ ಜ್ವಾಲೆಯಾಗಿ ಮುನ್ನುಗ್ಗುವುದು ಉತ್ತಮ.

**ಪುಸ್ತಕ ಪರಿಚಯ :**

**ಹರಿಕೀರ್ತನಾ ವಿದುಷಿ 'ಬಾಲಭಾರತಿ' ಪ್ರಶಸ್ತಿ ವಿಜೇತೆ ಹರಿಕಥೆ ಪದ್ಮಾವತಿಯವರ ಸಂಸ್ಮರಣೆ. ಸಂಪಾದಕರು - ವೈ.ಯಂ.ಶ್ರೀಧರ ರಾವ್, ಅದಮಾರು**

ಪುಸ್ತಕದ 'ನುಡಿಸೇಸೆ'ಯಲ್ಲಿ ನಂದಳಿಕೆ ಬಾಲಚಂದ್ರರಾವ್ ಹೇಳಿದಂತೆ- ''ಮಾನ್ಯ ವೈ.ಯಂ. ಶ್ರೀಧರರಾಯರು ಆದರ್ಶ ಶಿಕ್ಷಕರು, ಸಂಘಟಕರು, ಸಾಹಸಿ ಲೇಖಕರು ಹಾಗೂ ತ್ರಿಕಾಲ ಪ್ರಜ್ಞರು. ಹೀಗಾಗಿಯೇ ಅವರು ನಿನ್ನೆಯ ಆದರ್ಶವನ್ನು, ನಾಳೆಯ ನಿರೀಕ್ಷೆಯನ್ನು ಉಳ್ಳ ವರ್ತಮಾನ ಮುಖಿಗಳು; 'ಬಾಲಭಾರತಿ' ಎಂದೇ ಕೀರ್ತಿವೆತ್ತ ಪದ್ಮಾವತಿ ಬಾಯಿಯವರ ಬದುಕಿನ ಚಿತ್ರವನ್ನಿಲ್ಲಿ ಅಕ್ಷರಗಳ ಮೂಲಕ ರೇಖಿಸಿದ್ದಾರೆ. ಹರಿಕೀರ್ತನಾ ರಂಗದಲ್ಲಿ ಶ್ರೀಮತಿ ಪದ್ಮಾವತಿ ಬಾಯಿ ಅವರದ್ದು ಅಸಾಧಾರಣ ಪ್ರತಿಭೆ. ಅವರ ಇಳಿ ಹರೆಯದಲ್ಲಿ ನಾನು ಅವರ ಮಗಳು ವಿಜಯಲಕ್ಷ್ಮೀಯ ಕೈಹಿಡಿದು ಅಳಿಯನಾದೆ, ಅತ್ತೆಯ ಪ್ರತಿಭೆಗೆ ತಲೆಬಾಗಿದೆ. ಶ್ರೀಕ್ಷೇತ್ರ ಧರ್ಮಸ್ಥಳ-ಮಂಗಳೂರಿನಲ್ಲಿ ಅವರ ಹರಿಕೀರ್ತನೆಗಳನ್ನು ಕಿವಿಯಾರೆ ಕೇಳಿದೆ. ಕಣ್ತೆರೆದು ನೋಡಿದೆ. ಹಿರಿಯ ವಿದ್ವಜ್ಜನರು ಹೃದಯ ತುಂಬಿ ಪ್ರಶಂಸೆ ಮಾಡಿದ್ದನ್ನು ಕಂಡೆ. ಅವರ ಕುರಿತು ನೆನಪಲ್ಲಿ ಉಳಿಯುವ ಏನಾದರೂ ಕೆಲಸ ಮಾಡುವ ಆಶೆ ಹೊತ್ತೆ. ನನ್ನ ಆಶೆ ಜೀವಂತವಾಗಿರುವಾಗಲೇ, ಮಾನ್ಯ ಶ್ರೀಧರರಾಯರು ಈ ಕೃತಿ ರಚಿಸಿದರು. ನನ್ನಿಂದ ಮುನ್ನುಡಿ ಬಯಸಿದರು''.

ಪುಸ್ತಕದ ಬೆನ್ನುಡಿಯಲ್ಲಿ -ಕೊಕ್ಕಡ ಅನಂತ ಪದ್ಮನಾಭ ಶಾಸ್ತ್ರಿಯವರು ತಿಳಿಸಿದಂತೆ - ''ಶಾಲೆಯ ವಾರ್ಷಿಕೋತ್ಸವದಲ್ಲಿ ಈ ''ಬಾಲಭಾರತಿ'' ಆದಿಕವಿ ವಾಲ್ಮೀಕಿ ಎಂಬ ಹರಿಕಥೆ ಮಾಡಿದಾಗ ಪ್ರಶಂಸೆಗಳ ಸುರಿಮಳೆ. ತಂದೆಯ ಜತೆ ಶ್ರೀ ಶಿವರಾಮ ಕಾರಂತರೂ ಶ್ರೀ ರಾಮಕೃಷ್ಣ ಪರಮಹಂಸರ ಕಥೆ ಬರೆದುಕೊಟ್ಟು ತಾವೇ ತರಬೇತಿ ನೀಡಿದರು. ಶ್ರೀ ಮಂಜಯ್ಯ ಹೆಗ್ಗಡೆಯವರು (ಧರ್ಮಸ್ಥಳ) ತಲೆದೂಗಿ ಚಿನ್ನದ ಉಡುಗೊರೆ ನೀಡಿದರು. ಮತ್ತೆ ಈ ಬಾಲೆ ಹಿಂದಿರುಗಿ ನೋಡಲಿಲ್ಲ. ಸ್ಫೂರ್ತಿಪ್ರದವಾದ ಕಥನಕೌಶಲದಿಂದ ಆಮಂತ್ರಿಸಿದಲ್ಲೆಲ್ಲಾ ಹರಿಕಥೆ ಮಾಡುತ್ತಾ...... ಈಕೆ ಮುತ್ತು. ಬೆಳೆದ ಊರಿನ ಅಮೂಲ್ಯವಾದ ಮುತ್ತು. ಮುತ್ತಿನಂತಹ ಬಾಳು ಬಾಳಿದರು. ಮುತ್ತು ಬೆಳೆದ ಪುತ್ತೂರಿಗೂ- ದಕ್ಷಿಣ ಕನ್ನಡ ಜಿಲ್ಲೆಗೂ ಎಂದಿಗೂ ಅಳಿಯದ ಕೀರ್ತಿಯನ್ನು ಗಳಿಸಿಕೊಟ್ಟರು''.

ಈ ಕೃತಿ ಪದ್ಮಾವತಿಯವರ ಅಪೂರ್ವ ಸಾಧನೆಯನ್ನು ಮುಂದಿನ ತಲೆಮಾರಿನವರಿಗೆ ಯಶಸ್ವಿಯಾಗಿ ತಲುಪಿಸುತ್ತದೆ. ಇಲ್ಲಿ ಪದ್ಮಾವತಿಯವರಿಗೆ ಸಂಬಂಧಿಸಿ ಇಪ್ಪತ್ತೈದಕ್ಕೂ ಮಿಕ್ಕಿ ಅಪರೂಪದ ಆಕರ್ಷಕ ಛಾಯಾಚಿತ್ರಗಳಿವೆ.

ಬಾಲಭಾರತಿ ಪ್ರಶಸ್ತಿ ವಿಜೇತೆ ಹರಿಕಥೆ ಪದ್ಮಾವತಿಯವರ ಕೃತಿಯನ್ನು ಮುದ್ರಿಸಿದವರು ಪ್ರಕಾಶಕ ಸಂಸ್ಥೆ ವೇದಮೂರ್ತಿ ಎಚ್. ನಾರಾಯಣ ಭಟ್ ಟ್ರಸ್ಟ್ (ರಿ), ಹಳೆಯಂಗಡಿ.

ಈ ಪುಸ್ತಕವನ್ನು ಉಡುಪಿಯ 'ಹೊನ್ನಪದ್ಮ' ಮುದ್ರಣಾಲಯ ಅಂದವಾಗಿ ಮುದ್ರಿಸಿದೆ.

**- ವೈ. ಮೋಹನರಾವ್**

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು : ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಆಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ**